# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 23.04.2021ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡವಳಿಗಳು.**

ಉಪಸ್ಥಿತರು:

ಅನುಪಸ್ಥಿತರು:

## ಪ್ರಾರಂಭಿಕ

1. ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು, ಸರಕಾರದ ಪತ್ರ ಸಂಖ್ಯೆ ಇಡಿ 15 ಯುಡಿವಿ 2021 21.04.2021ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ನೂತನವಾಗಿ ಕುಲಸಚಿವರಾಗಿ ನೇಮಕರಾದ ಡಾ. ಕಿಶೋರ್ ಕುಮಾರ್.ಸಿ.ಕೆ., ನಿರ್ದೇಶಕರು ಹಾಗೂ ಪ್ರಾಧ್ಯಾಪಕರು ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಪರಿಚಯವನ್ನು ನೀಡಿ ಇವರನ್ನು ಸಭೆಗೆ ಸ್ವಾಗತಿಸಿದರು.

2. ಡಾ. ಕಿಶೋರ್ ಕುಮಾರ್.ಸಿ.ಕೆ., ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಇವರು ಮಾತನಾಡುತ್ತಾ. ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕುಲಸಚಿವರಾಗಿ ಸರಕಾರವು ಇವರನ್ನು ನೇಮಿಸಿರುವ ಬಗ್ಗೆ ಸರಕಾರಕ್ಕೆ, ಉನ್ನತ ಶಿಕ್ಷಣ ಇಲಾಖೆಗೆ ಕೃತಜ್ಞತೆಯನ್ನು ಅರ್ಪಿಸುತ್ತಾ ತಮ್ಮ ಕಾರ್ಯಾವಧಿಯಲ್ಲಿ ವಿಶ್ವವಿದ್ಯಾನಿಲಯದ ಬೆಳವಣಿಗೆಗಾಗಿ ಹಾಗೂ ವಿಶ್ವವಿದ್ಯಾನಿಲಯದ ಹೆಸರನ್ನು ಉನ್ನತ ಮಟ್ಟಕ್ಕೆ ತಲುಪಿಸಲು ಪ್ರಾಮಾಣಿಕವಾಗಿ, ಪಾರದರ್ಶಕತೆಯಿಂದ ಕಾರ್ಯನಿರ್ವಹಿಸುವುದಾಗಿ ತಿಳಿಸಿ ಎಲ್ಲಾ ಸದಸ್ಯರ ಸಹಕಾರವನ್ನು ಕೋರುತ್ತಾ ಮತ್ತೊಮ್ಮೆ ಎಲ್ಲಾ ಸಿಂಡಿಕೇಟು ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

3. ಪ್ರೊ. ಪಿ. ಎಲ್ .ಧರ್ಮ ಕುಲಸಚಿವರು (ಪರೀಕ್ಷಾಂಗ) ಹುದ್ದೆಯೊಂದಿಗೆ ದಿನಾಂಕ 22.03.2021ರಿಂದ 21.04.2021ರವರೆಗೆ ಪ್ರಭಾರ ಕುಲಸಚಿವರಾಗಿ ಒಂದು ತಿಂಗಳ ಕಾಲ ವಿಶ್ವವಿದ್ಯಾನಿಲಯದ ಆಡಳಿತ ಕುಲಸಚಿವರಾಗಿ ಕಾರ್ಯನಿರ್ವಹಿಸಿರುವುದನ್ನು ಮಾನ್ಯ ಕುಲಸಚಿವರು ಶ್ಲಾಘಿಸಿ, ದಿನಾಂಕ 21.04.2021ರಂದು ಕುಲಸಚಿವರ ಪ್ರಭಾರ ಕರ್ತವ್ಯದಿಂದ ಬಿಡುಗಡೆಗೊಂಡಿರುವುದನ್ನು ಸಭೆಗೆ ತಿಳಿಸುತ್ತಾ ವಿಶ್ವವಿದ್ಯಾನಿಲಯದ 39ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿರುವುದಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದರು.

4. 2021ನೇ ಸಾಲಿನ ಸಿಂಡಿಕೇಟಿನ ತೃತೀಯ ಸಾಮಾನ್ಯ ಸಭೆಯಲ್ಲಿ ನಾಲ್ಕು ಜನ ಸಿಂಡಿಕೇಟು ಸದಸ್ಯರು ವರ್ಚುವಲ್ ಆಗಿ ಹಾಜರಾದರು.

5. ಮಾನ್ಯ ಕುಲಪತಿಯವರು ಸಭೆಯಲ್ಲಿ ಮಾತನಾಡುತ್ತಾ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇದರ ಸಹಯೋಗದಲ್ಲಿ ಟೀಲು ಕಾಲೇಜು, ಅಮೇರಿಕ ಮತ್ತು ಮಂಗಳೂರು ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಶೈಕ್ಷಣಿಕವಾಗಿ ಕಾರ್ಯಯೋಜನೆಗಳನ್ನು ಹಾಕಿಕೊಳ್ಳಲಾಗಿರುವ ಬಗ್ಗೆ, ಮತ್ತು ಸ್ನಾತಕೋತ್ತರ ಎಂ.ಬಿ.ಎ. ,

ಎಂ.ಕಾಂ. ಕಾರ್ಯಕ್ರಮಗಳನ್ನು ನಡೆಸುವ ಸಂಬಂಧ ಈಗಾಗಲೇ ಸಮಿತಿ ಸಭೆಗಳು ನಡೆದಿರುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

6. ಮಾನ್ಯ ಕುಲಪತಿಯವರು ದಿನಾಂಕ 21.04.2021ರಂದು ಘನತೆವೆತ್ತ ರಾಜ್ಯಪಾಲರು ಮತ್ತು ಉನ್ನತ ಶಿಕ್ಷಣ ಸಚಿವರೊಂದಿಗೆ ನಡೆದ ಸಭೆಯ ವಿಚಾರವನ್ನು ಹಂಚಿಕೊಳ್ಳುತ್ತಾ, ಕೋವಿಡ್ -19ರ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈ ವಿಷಯವನ್ನು ಮಾನ್ಯ ಕುಲಪತಿಯವರು ಕಡ್ಡಾಯವಾಗಿ ಎಲ್ಲಾ ಸಭೆಗಳಲ್ಲಿ ಸೂಚಿಸಬೇಕಾಗಿ ತಿಳಿಸಿರುವುದನ್ನು ಸಭೆಗೆ ಮಾಹಿತಿ ನೀಡಿದರು. ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಯವರ ಸೂಚನೆಗಳನ್ನು ಪಾಲಿಸಿಕೊಂಡು ಪರೀಕ್ಷೆಗಳನ್ನು ನಡೆಸಬೇಕಾಗಿ ಸಭೆಯಲ್ಲಿ ತಿಳಿಸಿದರು.

ಮೇ ತಿಂಗಳಿನಿಂದ ವಿಶ್ವವಿದ್ಯಾನಿಲಯದ ಎಲ್ಲಾ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು, ಶಿಕ್ಷಕರು, ಮತ್ತು ಶಿಕ್ಷಕೇತರ ಸಿಬ್ಬಂದಿಗಳು ಕೋವಿಡ್ ಲಸಿಕೆಯನ್ನು ಸರಕಾರದ ಆದೇಶದಂತೆ ಹಾಕಿಸಿಕೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

7. ಮುಂದಿನ ದಿನಗಳಲ್ಲಿ Digital Valuationಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಸಲುವಾಗಿ ಕಾರ್ಯಪ್ರವೃತ್ತರಾಗಬೇಕಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವ್ಯವಹಾರ ಆಡಳಿತ ಕಾರ್ಯಕ್ರಮದ ಪರೀಕ್ಷಾ ಪತ್ರಿಕೆಗಳನ್ನು Digital Valuation ಮೂಲಕ ಕೈಗೊಂಡು ಯಶಸ್ವಿಗೊಂಡಿರುವುದನ್ನು ಸಭೆಗೆ ತಿಳಿಸಿದರು.

**I. ನಡವಳಿಗಳ ದೃಢೀಕರಣ**

**ದಿನಾಂಕ 04.03.2021ರಂದು ನಡೆದ 2021ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ದೃಢೀಕರಿಸಲಾಯಿತು.**

| | |
|---|---|
| ಕಾರ್ಯಸೂಚಿ ಸಂಖ್ಯೆ: | ಆಡಳಿತ ಸಾ.ಸ.2:2 (2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Chartered Accountant (ಲೆಕ್ಕಪಾಲರು) ರ ಸೇವೆಯನ್ನು ಬಳಸಿಕೊಳ್ಳಲು ಸಮಿತಿ ರಚಿಸಿದ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯಲ್ಲಿ ನಮೂದಿಸಿರವ Chartered Accountant (ಲೆಕ್ಕಪಾಲರು) ರ ಪಟ್ಟಿಯಲ್ಲಿ ಕ್ರಮ ಸಂಖ್ಯೆ 6 ಮತ್ತು 7 ನ್ನು ಹೊರತುಪಡಿಸಿ ಉಳಿದಂತೆ ಲೆಕ್ಕಪಾಲರುಗಳ ಯಾದಿಯನ್ನು ಅನುಮೋದಿಸಲಾಯಿತು. ಈಗಾಗಲೇ ಸದರಿಯವರುಗಳ ಸೇವೆಯನ್ನು ಬಳಸಿಕೊಂಡಿರುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ ಸಾ.ಸ.2:22 (2021) |
| ವಿಷಯ: | ಡಾ. ಎಂ. ಜಯಶಂಕರ, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಚಿಕ್ಕ ಅಳುವಾರ ಇವರಿಗೆ ಡಿ.ಎಸ್ಸಿ. ( Doctor of Science) ಪದವಿ ನೀಡುವ ಬಗ್ಗೆ. |
| ನಿರ್ಣಯ: | ಸದರಿಯವರು ಡಿ.ಎಸ್ಸಿ. ಪದವಿಗಾಗಿ ಸಲ್ಲಿಸಿರುವ ಅರ್ಜಿಯು ಅಪೂರ್ಣವಾಗಿರುವ ಹಿನ್ನೆಲೆಯಲ್ಲಿ ಸದ್ರಿ ಅರ್ಜಿಯನ್ನು ಸಭೆಯು ತಿರಸ್ಕರಿಸಲು ನಿರ್ಣಯಿಸಿತು. |

ಇತರ ವಿಷಯಗಳ ಕ್ರಮ ಸಂಖ್ಯೆ 8ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಲಾಯಿತು.

8. ಮೆ. ಕ್ಯಾಂಪಸ್ ಮ್ಯಾನೇಜ್ ಮೆಂಟ್ ಸಂಸ್ಥೆಯು ಈಗಾಗಲೇ ವಿದ್ಯಾರ್ಥಿ ಪ್ರವೇಶಾತಿ ಪ್ರಕ್ರಿಯೆಯ ಕೆಲಸವನ್ನು ಕೈಗೆತ್ತಿಕೊಂಡು ಶೈಕ್ಷಣಿಕ ವಿಭಾಗದಲ್ಲಿ ವಿದ್ಯಾರ್ಥಿ ಪ್ರವೇಶಾತಿ ಪ್ರಕ್ರಿಯೆಯು ಕಾರ್ಯನಿರ್ವಹಿಸುತ್ತಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಮೆ. ಕ್ಯಾಂಪಸ್ ಮ್ಯಾನೇಜ್ ಮೆಂಟ್ ಸಂಸ್ಥೆಯ ಕಾರ್ಯವೈಖರಿಯ ಬಗ್ಗೆ ಮುಂದಿನ ಸಿಂಡಿಕೇಟು ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಮಂಡಿಸಲು ನಿರ್ಣಯಿಸಲಾಯಿತು.

ದಿನಾಂಕ 09.04.2021ರಂದು ನಡೆದ 2021ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಡವಳಿಯ ದೃಢೀಕರಣ.

-ದೃಢೀಕರಿಸಲಾಯಿತು.-

ದಿನಾಂಕ 09.04.2021ರಂದು ನಡೆದ 2021ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಯ ದೃಢೀಕರಣ.

-ದೃಢೀಕರಿಸಲಾಯಿತು.-

## II. ಅನುಸರಣಾ ವರದಿಯ ಅನುಮೋದನೆ

ದಿನಾಂಕ 25.01.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

ಅನುಮೋದಿಸಲಾಯಿತು.

### III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಇಡಿ:ಸಾ.ಸ.3:01 (2021) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ Food court ನಿರ್ಮಾಣಕ್ಕಾಗಿ ಮಂಗಳ ಕ್ಯಾಂಟೀನಿನ ಹಿಂಭಾಗದಲ್ಲಿ ವಿಸ್ತರಣಾ ಕಾಮಗಾರಿ – ಅಂದಾಜು ಪಟ್ಟಿ ಅನುಮೋದನೆ ಬಗ್ಗೆ ಹೆಚ್ಚುವರಿ ಮಾಹಿತಿ ನೀಡುವ ಕುರಿತು (ಮರು ಮಂಡಣೆ) ಅಂದಾಜು ಮೊತ್ತ ರೂ.33.40 ಲಕ್ಷ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ:ಸಾ.ಸ.3:02 (2021) |
| **ವಿಷಯ:** | ಯುಜಿಸಿ ೬ನೇ ವೇತನ ಶ್ರೇಣಿಗೆ ಸಂಬಂಧಿಸಿದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂನಲ್ಲಿ ಸಹ ಪ್ರಾಧ್ಯಾಪಕ (ಹಂತ 4)ರಿಂದ ಪ್ರಾಧ್ಯಾಪಕ (ಹಂತ 5)ಕ್ಕೆ ಪದೋನ್ನತಿ ಹೊಂದಿರುವ ಪ್ರಾಧ್ಯಾಪಕರು ತಮ್ಮ ಈ ಪದೋನ್ನತಿ ಹಂತದ |

ವೇತನ ನಿಗದೀಕರಣವನ್ನು ಮಾರ್ಪಡಿಸಿ ಒಂದು ಕಾಲ್ಪನಿಕ ವಾರ್ಷಿಕ ಭಡ್ತಿಯನ್ನು ಸೇರಿಸಿ ಪರಿಷ್ಕರಿಸಿ ವೇತನ ಮರುನಿಗದೀಕರಣ ಮಾಡಬೇಕೆಂದು ಮನವಿ ಸಲ್ಲಿಸಿದ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ:ಸಾ.ಸ.3:03(2021)

**ವಿಷಯ:** M/s Roy Constructions ಇವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಿರುವ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿ ಸರಕಾರಕ್ಕೆ ಪಾವತಿಸಿರುವ ಸೇವಾ ಶುಲ್ಕ ಮರುಭರಣೆ ಕೋರಿ ಜಿಲ್ಲಾ ನ್ಯಾಯಾಲಯ ಮಂಗಳೂರು ಇಲ್ಲಿ ಹೂಡಿರುವ ದಾವೆಯನ್ನು (ಸಂಖ್ಯೆ:O.S. No.:300/2017) "Arbitration" ಮೂಲಕ ಇತ್ಯರ್ಥಗೊಳಿಸುವ ಸಾಧ್ಯತೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** Arbitrator ನ್ನು ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ:ಸಾ.ಸ.3:04 (2021)

**ವಿಷಯ:** ಫೆಬ್ರುವರಿ/ಸೆಪ್ಟೆಂಬರ್/ಅಕ್ಟೋಬರ್ 2020ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.3:05 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ಯಾರಿ ಅಧ್ಯಯನ ಪೀಠ ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ತಿದ್ದುಪಡಿ ಮಾಡಿ ಅನುಮೋದಿಸುವ ಕುರಿತು.

**ನಿರ್ಣಯ:** ಕರಡು ತಿದ್ದುಪಡಿ ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.3:06 (2021)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕಾರ್ಯಕ್ರಮವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ನ್ಯಾಕ್ ಮಾನ್ಯತಾ ಗ್ರೇಡಿನಲ್ಲಿ ವಿಶ್ವವಿದ್ಯಾನಿಲಯಕ್ಕೆ ನಿರ್ದಿಷ್ಟ ಅಂಕಗಳು ದೊರಕದಿರುವುದರಿಂದ ದಾವೆ ಹೂಡಲು ಅವಕಾಶವಿರುವುದಿಲ್ಲವೆಂದು ಪರಿಗಣಿಸಿ ನ್ಯಾಯಾಲಯದಲ್ಲಿ ದಾವೆ ಹೂಡದಿರಲು ನಿರ್ಣಯಿಸಲಾಯಿತು.

ಮುಂದುವರಿದು, ಬೇಡಿಕೆಯಲ್ಲಿರುವ ಆಧುನಿಕ, ಕೌಶಲ್ಯ ಭರಿತ ವಿಷಯಗಳಲ್ಲಿ ಸರ್ಟಿಫಿಕೇಟು ಮತ್ತು ಡಿಪ್ಲೋಮಾ ಕಾರ್ಯಕ್ರಮಗಳನ್ನು ಆನ್‌ಲೈನ್ ಮುಖಾಂತರ ಪ್ರಾರಂಭಿಸುವ ಬಗ್ಗೆ ಸವಿಸ್ತಾರವಾದ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ ಇವರಿಗೆ ಸೂಚಿಸಲಾಯಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪ.ಜಾ.ಪ.ಪಂ ಘಟಕ:ಸಾ.ಸ.3:07 (2021) |
| **ವಿಷಯ:** | ಶ್ರೀ ನಾಗರಾಜು ವೈ.ಎಸ್., ಸಂಶೋಧನಾ ವಿದ್ಯಾರ್ಥಿ, ಭೌತಶಾಸ್ತ್ರ ವಿಭಾಗ ಇವರು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ. |
| **ನಿರ್ಣಯ:** | ಸದರಿ ಸಮ್ಮೇಳನಕ್ಕೆ ನೋಂದಣಿ ಮಾಡುವ ಮೊದಲು ಸಮ್ಮೇಳನದ ವಾಸ್ತವಿಕ ಅಂಶವನ್ನು( physical / Virtual Mode) ತಿಳಿದುಕೊಂಡು ಕುಲಸಚಿವರು ಸಂಶೋಧನಾ ವಿದ್ಯಾರ್ಥಿಗೆ ಅರಿವು ಮೂಡಿಸಲು ಸೂಚಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪ.ಜಾ.ಪ.ಪಂ ಘಟಕ:ಸಾ.ಸ.3:08 (2021) |
| **ವಿಷಯ:** | ಶ್ರೀ ವಿರೇಶ್ ಶಾಂತಪ್ಪ., ಸಂಶೋಧನಾ ವಿದ್ಯಾರ್ಥಿ, ಭೌತಶಾಸ್ತ್ರ ವಿಭಾಗ ಇವರು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ. |
| **ನಿರ್ಣಯ:** | ಸದರಿ ಸಮ್ಮೇಳನಕ್ಕೆ ನೋಂದಣಿ ಮಾಡುವ ಮೊದಲು ಸಮ್ಮೇಳನದ ವಾಸ್ತವಿಕ ಅಂಶವನ್ನು( physical / Virtual Mode) ತಿಳಿದುಕೊಂಡು ಕುಲಸಚಿವರು ಸಂಶೋಧನಾ ವಿದ್ಯಾರ್ಥಿಗೆ ಅರಿವು ಮೂಡಿಸಲು ಸೂಚಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪ.ಜಾ.ಪ.ಪಂ ಘಟಕ:ಸಾ.ಸ.3:09 (2021) |
| **ವಿಷಯ:** | ಶ್ರೀ ಗಣೇಶ ಹೆಚ್., ಸಂಶೋಧನಾ ವಿದ್ಯಾರ್ಥಿ, ಭೌತಶಾಸ್ತ್ರ ವಿಭಾಗ ಇವರು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ. |
| **ನಿರ್ಣಯ:** | ಸದರಿ ಸಮ್ಮೇಳನಕ್ಕೆ ನೋಂದಣಿ ಮಾಡುವ ಮೊದಲು ಸಮ್ಮೇಳನದ ವಾಸ್ತವಿಕ ಅಂಶವನ್ನು( physical / Virtual Mode) ತಿಳಿದುಕೊಂಡು ಕುಲಸಚಿವರು ಸಂಶೋಧನಾ ವಿದ್ಯಾರ್ಥಿಗೆ ಅರಿವು ಮೂಡಿಸಲು ಸೂಚಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ:ಸಾ.ಸ.3:10 (2021) |
| **ವಿಷಯ:** | ಕರ್ನಾಟಕ ಕಂಪ್ಯೂಟರ್ ಅಕಾಡೆಮಿ, ಮಂಗಳೂರು ಇವರ ಆಡಳಿತದಲ್ಲಿರುವ ಇಂಡಸ್ ಕಾಲೇಜು, ಪುತ್ತೂರು ಎಂಬ ವಿದ್ಯಾಸಂಸ್ಥೆಯನ್ನು ಮಹಾವೀರ ಎಜ್ಯುಕೇಶನ್ ಟ್ರಸ್ಟಿನ ಆಡಳಿತಕ್ಕೆ ಹಸ್ತಾಂತರಿಸುವ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಮುಂದುವರಿಕೆ ಸಂಯೋಜನೆ ನೀಡುವ ಅನುಶಾಸನದಲ್ಲಿ ಅವಕಾಶವಿಲ್ಲದಿರುವುದರಿಂದ ದ್ವಿತೀಯ ಮತ್ತು ತೃತೀಯ ವರ್ಷದ ವರ್ಗಾವಣಾ ಪ್ರವೇಶಾತಿಗೆ ಅನುಮತಿ ನೀಡಲು ಸಾಧ್ಯವಿಲ್ಲ ಹಾಗೂ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹೊಸ ಸಂಯೋಜನೆ ಕೋರಿ ವಿಶ್ವವಿದ್ಯಾನಿಲಯಕ್ಕೆ ಅರ್ಜಿಸಲ್ಲಿಸಬಹುದೆಂಬುದಾಗಿ ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.3:11 (2021) |
| ವಿಷಯ: | ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಸಭೆಗಳಿಗೆ ಒದಗಿಸಲಾಗುವ ಊಟೋಪಹಾರದ ದರಗಳ ಪರಿಷ್ಕರಣೆ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.3:12 (2021) |
| ವಿಷಯ: | ಸ್ನಾತಕೋತ್ತರ ಆಂಗ್ಲ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ. |
| ನಿರ್ಣಯ: | ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.3:13 (2021) |
| ವಿಷಯ: | ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ. |
| ನಿರ್ಣಯ: | ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.3:14 (2021) |
| ವಿಷಯ: | ಪದವಿ ಮಟ್ಟದ ಭೂಗೋಳಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ. |
| ನಿರ್ಣಯ: | ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.3:15 (2021) |
| ವಿಷಯ: | ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ. |
| ನಿರ್ಣಯ: | ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.3:16 (2021) |
| ವಿಷಯ: | ಪದವಿ ಮತ್ತು ಸ್ನಾತಕೋತ್ತರ ಟ್ರಾವೆಲ್ ಆಂಡ್ ಟೂರಿಸಂ ಮ್ಯಾನೇಜ್ ಮೆಂಟ್, ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಹಾಗೂ ಪಿ.ಜಿ.ಡಿ.ಟಿ.ಹೆಚ್.ಎಂ. (ಸ್ನಾತಕೋತ್ತರ ಡಿಪ್ಲೋಮಾ ಇನ್ ಟೂರಿಸಂ ಆಂಡ್ ಹೋಟೇಲ್ ಮ್ಯಾನೇಜ್ ಮೆಂಟ್) ಮತ್ತು ಏವಿಯೇಶನ್ ಆಂಡ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ (ಸರ್ಟಿಫಿಕೇಟ್ / ಡಿಪ್ಲೋಮಾ ಕೋರ್ಸ್) ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ. |
| ನಿರ್ಣಯ: | ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:17 (2021)

ವಿಷಯ: ಪದವಿ ಮಟ್ಟದ ಸಮಾಜಕಾರ್ಯ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

ನಿರ್ಣಯ: ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:18 (2021)

ವಿಷಯ: ಸಂಸ್ಕೃತ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

ನಿರ್ಣಯ: ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:19 (2021)

ವಿಷಯ: ಪದವಿ ಮಟ್ಟದ ಎಫ್.ಎನ್.ಡಿ. ಮತ್ತು ಸ್ನಾತಕೋತ್ತರ ಫುಡ್ ಸಾಯನ್ಸ್ ಆಂಡ್ ನ್ಯೂಟ್ರೀಷನ್ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

ನಿರ್ಣಯ: ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:20 (2021)

ವಿಷಯ: ಪದವಿ ಮಟ್ಟದ ಭರತನಾಟ್ಯ, ಕರ್ನಾಟಕ್ ಸಂಗೀತ ಮತ್ತು ಪಾಶ್ಚಾತ್ಯ ಸಂಗೀತ ಆಂಡ್ ಸ್ನಾತಕೋತ್ತರ ಭರತನಾಟ್ಯ, ಕರ್ನಾಟಕ್ ಸಂಗೀತ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

ನಿರ್ಣಯ: ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.3:21 (2021)

ವಿಷಯ: ಡಾ.ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು – ಇವರು ಸಲ್ಲಿಸಿರುವ ಕಾರ್ಯಸೂಚಿ ಕುರಿತು.

**1.** To introduce an optional paper on Kodava language for M.A. in Kannada literature. (Kodava Basha Adyayana).

ನಿರ್ಣಯ: ಸ್ನಾತಕೋತ್ತರ ಕನ್ನಡ ಕಾರ್ಯಕ್ರಮದಲ್ಲಿ ಕೊಡವ ವಿಷಯಗಳ ಅಧ್ಯಯನವನ್ನು ಅಳವಡಿಸಿರುವ ಬಗ್ಗೆ ಸದರಿಯವರಿಗೆ ತಿಳಿಸಿ ಸಭೆಯ ಗಮನಕ್ಕೆ ತರಲಾಯಿತು.

2. To send back to the UG the teachers who have been transferred from UG to PG with / without post especially during former V.C. Prof. Byrappa's period it includes Dr. Wajeeda Bano, Dr. Nagappa Gowda, Dr. Dayananda Nayak and Dr. Rajendra. Dr. Rajendra has already been transferred to FMKMCC but it has not come into effect.

ನಿರ್ಣಯ: ಕಾರ್ಯಸೂಚಿ ಸಂಖ್ಯೆ: 33ರಲ್ಲಿ ಕ್ರಮಕೈಗೊಳ್ಳಲಾಗಿದೆ.

3. To Frame the Transfer policy for the teaching and non-teaching staff of Mangalore University and constituent College

ನಿರ್ಣಯ: ಬೋಧಕೇತರ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿ ಮಾರ್ಗಸೂಚಿ

ತಯಾರಿಸಲು ಕ್ರಮಕೈಗೊಳ್ಳಲಾಗಿರುವ ಬಗ್ಗೆ ಸದರಿಯವರಿಗೆ ತಿಳಿಸಲಾಯಿತು.

4. To give reservation on Geographical basis to Kodagu District in the selection of candidates for Ph.D. courses. To consider the creation of University for Kodagu District.

**ನಿರ್ಣಯ:** ಪ್ರಸ್ತಾವನೆಯನ್ನು ಕೈಬಿಡಲಾಯಿತು.

5. To give promotion to Saraswathi of KMKMCC who has been continuing as Second Devison Clerk for nearly 20 years.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿದ ಕೂಡಲೇ ಮುಂಭಡ್ತಿಯಡಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಅರ್ಹ ಸಿಬ್ಬಂದಿಗಳಿಗೆ ಭಡ್ತಿ ನೀಡುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

6. The negative and non-co-operative attitude of the Principal of FMKMCC needs to be rectified.

**ನಿರ್ಣಯ:** ಕುಲಸಚಿವರು ಮತ್ತು ಮಾನ್ಯ ಕುಲಪತಿಯವರು ಸದರಿ ಕಾಲೇಜಿನ ಪ್ರಾಂಶುಪಾಲರನ್ನು ವಿಶ್ವವಿದ್ಯಾನಿಲಯಕ್ಕೆ ಕರೆಸಿಕೊಂಡು ಮೇಲ್ಕಾಣಿಸಿದ ವಿಚಾರಗಳ ಬಗ್ಗೆ ತಿಳುವಳಿಕೆ ನೀಡುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.3:22 (2021)

**ವಿಷಯ:** ಡಾ.ಎಂ.ಜಯಶಂಕರ, ಸೂಕ್ಷ್ಮಾಣುಜೀವ ವಿಜ್ಞಾನ, ಚಿಕ್ಕ ಅಳುವಾರ ಇವರಿಗೆ ಡಿ.ಎಸ್ಸಿ. (Doctor of Science) ಪದವಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಕೈಬಿಡಲಾಯಿತು. ಮುಂದುವರಿದು, ವಿಶ್ವವಿದ್ಯಾನಿಲಯದಲ್ಲಿ ಡಿ.ಎಸ್ಸಿ. ಮತ್ತು ಡಿ.ಲಿಟ್ ಪದವಿ ಪ್ರಧಾನಕ್ಕೆ ಸಂಬಂಧಿಸಿ ಚಾಲ್ತಿಯಲ್ಲಿರುವ ಪರಿನಿಯಮವನ್ನು ಉನ್ನತೀಕರಿಸಿಕೊಂಡು ತಿದ್ದುಪಡಿ ಪರಿನಿಯಮವು ವಿವಿಧ ಪ್ರಾಧಿಕಾರಗಳಲ್ಲಿ ಅನುಮೋದನೆಗೊಂಡು ಸರಕಾರದಿಂದ ಅನುಮೋದನೆಗೊಂಡ ನಂತರವೇ ಅರ್ಜಿಗಳನ್ನು ಸ್ವೀಕರಿಸಲು ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.3:23 (2021)

**ವಿಷಯ:** ಪ್ರೊ.ಎನ್.ಪಿ.ನಾರಾಯಣ ಶೆಟ್ಟಿ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ- ಉನ್ನತ ಶಿಕ್ಷಣವನ್ನು ನೀಡುತ್ತಿರುವ ವಿಶ್ವವಿದ್ಯಾನಿಲಯದಲ್ಲಿ ಭಾಷಾ ಬೋಧನೆಗೆ ಭಾಷೆಗಳ ಆಯ್ಕೆ ಕುರಿತಂತೆ.

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.3:24 (2021)

**ವಿಷಯ:** ಪ್ರೊ.ಬಿ.ಉದಯ, ಡೀನರು ಮತ್ತು ಸಿಂಡಿಕೇಟು ಸದಸ್ಯರು – ಇವರು ಸಲ್ಲಿಸಿರುವ ಕಾರ್ಯಸೂಚಿ – ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿಭಾಗಗಳು ಹಮ್ಮಿಕೊಳ್ಳುವ ಕಾರ್ಯಾಗಾರಕ್ಕೆ ಸಂಬಂಧಿಸಿದ ನಿಯಮಗಳ ರಚನೆ ಕುರಿತು.

**ನಿರ್ಣಯ:** ವಿಭಾಗಗಳು ಹಮ್ಮಿಕೊಳ್ಳುವ ಕಾರ್ಯಾಗಾರಕ್ಕೆ ಸಂಬಂಧಿಸಿದಂತೆ ನಿಯಮ/ಮಾರ್ಗಸೂಚಿಗಳ ರಚನೆಗೆ ಈ ಕೆಳಗಿನಂತೆ ಸಮಿತಿಯನ್ನು ರಚಿಸಲು ಮತ್ತು ಸಮಿತಿಯು ತಯಾರಿಸಿದ ನಿಯಮಗಳನ್ನು ಮುಂದಿನ ಸಿಂಡಿಕೇಟು ಸಭೆಗೆ

ಮಂಡಿಸಲು ನಿರ್ಣಯಿಸಲಾಯಿತು.

1. ಹಿರಿಯ ಡೀನರು - ಅಧ್ಯಕ್ಷರು
2. ಎಲ್ಲಾ ನಿಕಾಯಗಳ ಡೀನರುಗಳು - ಸದಸ್ಯರು
3. ಪ್ರೊ.ಕಿಶೋರಿ ನಾಯಕ್, ಅಧ್ಯಕ್ಷರು, MUTA - ಸದಸ್ಯರು
4. ಪ್ರೊ. ಬಿ.ಹೆಚ್. ಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಕವಿಜ್ಞಾನ ವಿಭಾಗ - ಸದಸ್ಯರು

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.3:25 (2021)

**ವಿಷಯ:** ಡಾ. ಸಿಪ್ರಿಯನ್ ಮೊಂತೇರೋ, ಸಿಂಡಿಕೇಟ್ ಸದಸ್ಯರು – ಇವರು ಸಲ್ಲಿಸಿರುವ ಪ್ರಸ್ತಾವನೆ – ಬಿ.ಎಡ್. ಕಾಲೇಜುಗಳನ್ನು ಆಡಳಿತಾತ್ಮಕವಾಗಿ ಪ್ರತ್ಯೇಕವಾಗಿ ಪರಿಗಣಿಸುವ ಬಗ್ಗೆ ಮತ್ತು ಬಿ.ಎಡ್. ಕಾಲೇಜು ಪ್ರಾಂಶುಪಾಲರ ಸಭೆಯನ್ನು ಆಯೋಜಿಸುವ ಬಗ್ಗೆ.

**ನಿರ್ಣಯ:** ಈ ಹಿಂದೆ ಬಿ.ಎಡ್. ಕಾಲೇಜು ಪ್ರಾಂಶುಪಾಲರ ಸಭೆಯನ್ನು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುತ್ತಿದ್ದು, ಬಿ.ಎಡ್. ಪದವಿ ಕಾರ್ಯಕ್ರಮದ ಶೈಕ್ಷಣಿಕ ವೇಳಾಪಟ್ಟಿಯು ವಿಶ್ವವಿದ್ಯಾನಿಲಯದ ಇತರ ಪದವಿ ಕಾರ್ಯಕ್ರಮಗಳ ಶೈಕ್ಷಣಿಕ ವೇಳಾಪಟ್ಟಿಗಿಂತ ವಿಭಿನ್ನ ಮತ್ತು ತರಗತಿಗಳ ಪ್ರಾರಂಭಿಕ ದಿನಾಂಕವೂ ಕೂಡ ವಿಭಿನ್ನವಾಗಿರುತ್ತದೆ. ಇನ್ನು ಮುಂದಿನ ದಿನಗಳಲ್ಲಿ ಬಿ.ಎಡ್. ಕಾಲೇಜು ಪ್ರಾಂಶುಪಾಲರ ಸಭೆಯನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕವಾಗಿ ನಡೆಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.3:26 (2021)

**ವಿಷಯ:** ಶೈಕ್ಷಣಿಕ ವರ್ಷ 2020-21ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ, ಕುಶಾಲನಗರ ಇಲ್ಲಿ ನಡೆಸಲ್ಪಡುವ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ ಪರಿಮಿತಿ ನಿಗಿದಿಪಡಿಸಿರುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.3:27 (2021)

**ವಿಷಯ:** ಶ್ರೀ ಸುಬ್ರಹ್ಮಣ್ಯ ಉಳ್ಳೂರು, ಅನುಚರ, ಕಾರ್ಯಕಾರಿ ಅಭಿಯಂತರರ ಕಚೇರಿ , ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಕಾರ್ಯಸೂಚಿಯ ಮೂರನೇ ಪ್ಯಾರಾದಲ್ಲಿ ನಮೂದಿಸಿದ **"ಶ್ರೀ ಸುಬ್ರಹ್ಮಣ್ಯ ಉಳ್ಳೂರು ........................................ಸ್ವತ: ಪರಿಶೀಲಿಸಿರುವುದರಿಂದ"** ವಾಕ್ಯವನ್ನು ಅಳಿಸಲು ನಿರ್ಣಯಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.3:28 (2021) |
| ವಿಷಯ: | ಶ್ರೀಮತಿ ಸಿ. ರಾಜೇಶ್ವರಿ, ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.3:29 (2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸಿ ದಿನಾಂಕ 04.06.2018ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಖಾಯಂಗೊಳಿಸಲಾದ 04 ಮಂದಿ ವಾಹನ ಚಾಲಕರ ವೇತನ ಪಾವತಿ ಬಗ್ಗೆ. |
| ನಿರ್ಣಯ: | ಕಾರ್ಯಸೂಚಿಯನ್ನು ಹಿಂಪಡೆಯಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.3:30 (2021) |
| ವಿಷಯ: | ಪುತ್ತೂರಿನ ನೆಲ್ಯಾಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಮತ್ತು ಹುದ್ದೆಗಳ ಸೃಜನೆಯ ಸಂಬಂಧದ ಪರಿನಿಯಮದ ಬಗ್ಗೆ. |
| ನಿರ್ಣಯ: | ಸದರಿ ಕಾಲೇಜು ಸ್ಥಾಪನೆಗೆ ಸಂಬಂಧಿಸಿ ಸಿಂಡಿಕೇಟು ಸಭೆಯ ನಿರ್ಣಯ, ಪ್ರಾರಂಭವಾದ ವರ್ಷ, ಸಂಪನ್ಮೂಲಗಳ ವಿವರ, ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪರಿಮಿತಿ, ವಿಶ್ವವಿದ್ಯಾನಿಲಯಕ್ಕೆ ಇದರಿಂದ ತಗಲಿದ ಆರ್ಥಿಕ ಹೊರೆ ಮತ್ತು ಆಂತರಿಕ ಸಂಪನ್ಮೂಲಗಳಿಂದ ವ್ಯಯಿಸಿದ ವರ್ಷವಾರು ವೆಚ್ಚ ಇತ್ಯಾದಿಗಳ ಸವಿಸ್ತಾರವಾದ ಮಾಹಿತಿಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.3:31 (2021) |
| ವಿಷಯ: | ಡಾ.ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಬಗ್ಗೆ. |
| ನಿರ್ಣಯ: | The Syndicate has unanimously resolved to take up the representation / explanation of Prof. Jayashankar for consideration in the next meeting of the Syndicate as the voluminous documents and relevant facts and circumstances and all concerned materials are required to be examined in its proper perspective based on applicable statutory provisions. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ:ಸಾ.ಸ.3:32 (2021) |
| **ವಿಷಯ:** | ಹೊಸ ಪಿಂಚಣಿ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದಿಂದ ಹಿಂತೆಗೆದುಕೊಂಡು PFRDA (Pension Fund Regulatory and Development Authority) ಯ NSDL (National Securities Depository Limited) ನಲ್ಲಿ ಹೂಡಿಕೆ ಮಾಡುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ:ಸಾ.ಸ.3:33 (2021) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ಬೋಧಕ ಸಿಬ್ಬಂದಿಗಳನ್ನು ಹುದ್ದೆ ಸಹಿತ ವರ್ಗಾವಣೆ ಮಾಡಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಿದ ಸಮಿತಿಯು ಸಲ್ಲಿಸಿದ ವರದಿಯ ಬಗ್ಗೆ. |
| **ನಿರ್ಣಯ:** | ಸದರಿ ಸಮಿತಿಯು ಸಲ್ಲಿಸಿರುವ ವರದಿಯನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಲಾಯಿತು. ಮುಂದುವರಿದು, ಈ ಕೆಳಗಿನಂತೆ ನಿರ್ಣಯಿಸಲಾಯಿತು.<br><br>The Syndicate has, after the detailed deliberations, resolved to accept the recommendations made by the Chairman of the Committee as per the report dated 08-04-2021 on the transfer policy with retrospective effect and reject the recommendations submitted by the members of the said Committee having regard to the provisions of law, exigency of the administration and the interest of the students, who are directly affected stakeholders of the transfers of teachers from constituent college to the University / PG Centres. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಆಡಳಿತ:ಸಾ.ಸ.3:34 (2021) |
| **ವಿಷಯ:** | ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆ / ದಿನಭತ್ಯೆ ಪಾವತಿಸುವ ಬಗ್ಗೆ. |
| **ನಿರ್ಣಯ:** | ಕಾರ್ಯಸೂಚಿಯನ್ನು ಹಿಂಪಡೆಯಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಾರ್ವತ್ರಿಕ:ಸಾ.ಸ.3:35 (2021) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಆವರಣ, ಮಂಗಳಗಂಗೋತ್ರಿ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಅಳುವಾರ ಇಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭದ್ರತಾ, ಶುಚಿತ್ವ, ತೋಟಗಾರಿಕಾ ಹಾಗೂ 'ಡಿ' ಗ್ರೂಪ್ ಸಿಬ್ಬಂದಿಗಳ ಸೇವೆಯ ಗುತ್ತಿಗೆಯನ್ನು |

ವಹಿಸಿಕೊಂಡಿರುವ M/s Sri Ranganatha Enterprises, Mysuru ಸಂಸ್ಥೆಯ ಅವಧಿ ಮುಗಿದಿದ್ದು, ಹೊಸ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸದ್ರಿಯವರ ಗುತ್ತಿಗೆ ಅವಧಿ ವಿಸ್ತರಣೆ ಮಾಡುವ ಬಗ್ಗೆ.

**ನಿರ್ಣಯ:** ಹೊಸ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿ ಟೆಂಡರು ಪ್ರಕ್ರಿಯೆಯ ವಿಳಂಬವನ್ನು ಸಿಂಡಿಕೇಟು ಗಂಭೀರವಾಗಿ ಪರಿಗಣಿಸಿತು.

ಹೊಸ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆಯನ್ನು ಕೆಟಿಪಿಪಿ ಕಾಯಿದೆ ಪ್ರಕಾರ ಅಲ್ಪಾವಧಿ ಟೆಂಡರು ಮೂಲಕ ಶೀಘ್ರವಾಗಿ ಒಂದು ತಿಂಗಳೊಳಗಾಗಿ ಕೈಗೊಳ್ಳುವ ಷರತ್ತಿನೊಂದಿಗೆ ಸದರಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ M/s Sri Ranganatha Enterprises, Mysuru ಇವರ ಗುತ್ತಿಗೆ ಅವಧಿ ವಿಸ್ತರಣೆ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಾರ್ವತ್ರಿಕ:ಸಾ.ಸ.3:36 (2021)**

**ವಿಷಯ:** ಶ್ರೀ ಗೋಪಾಲಕೃಷ್ಣ ದೇವಸ್ಥಾನ, ಶಕ್ತಿನಗರ, ಮಂಗಳೂರು ಇದರ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಮಿತಿಯು ಹೊರ ತರುವ ಸ್ಮರಣ ಸಂಚಿಕೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಜಾಹೀರಾತು ಪ್ರಕಟಣೆ ಕುರಿತು.

**ನಿರ್ಣಯ:** ಕಾರ್ಯಸೂಚಿಯನ್ನು ಹಿಂಪಡೆಯಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.3:37 (2021)

**ವಿಷಯ:** ಹೊಸ ಕಟ್ಟಡದಲ್ಲಿ ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ ಇದನ್ನು ಮುಂದುವರೆಸುವ ಸಂಬಂಧ ಬಾಡಿಗೆ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಪ್ರಸ್ತುತ ಲೋಕೋಪಯೋಗಿ ಇಲಾಖಾ ಗೊತ್ತುಪಡಿಗೆ ಅನುಗುಣವಾಗಿ ತಿಂಗಳೊಂದರ ರೂ.19,677/- (ರೂಪಾಯಿ ಹತ್ತೊಂಬತ್ತು ಸಾವಿರದ ಆರುನೂರ ಎಪ್ಪತ್ತೇಳು ಮಾತ್ರ) ಕ್ಕೆ ಮಾತ್ರ ಅನುಮೋದನೆ ನೀಡಲಾಯಿತು. ಮುಂದುವರಿದು, ಹೊಸ ಕಟ್ಟಡಕ್ಕೆ ಹೆಚ್ಚುವರಿಯಾಗಿ ಮೂಲಭೂತ ಸೌಕರ್ಯವನ್ನು ಒದಗಿಸಿರುವ ಬಗ್ಗೆ (ಕಟ್ಟಡ ನಿರ್ವಹಣೆ, ಶೌಚಾಲಯದ ಪ್ರತ್ಯೇಕ ವ್ಯವಸ್ಥೆ, ನೀರಿನ ವ್ಯವಸ್ಥೆ) ಲೋಕೋಪಯೋಗಿ ಇಲಾಖಾ ಗೊತ್ತುಪಾಡಿಗೆ ಅನುಗುಣವಾದ ದರದೊಂದಿಗೆ ಮರುನಿಗದಿಪಡಿಸಿ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ: ಸಾ.ಸ.3:38 (2021)

**ವಿಷಯ:** 2021ನೇ ಸಾಲಿನ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಪರೀಕ್ಷಾ ನಮೂನೆ /ಲಕೋಟೆ/ಲೇಖನ ಸಾಮಾಗ್ರಿಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 18.03.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪರೀಕ್ಷಾಂಗ: ಸಾ.ಸ.3:39 (2021) |
| **ವಿಷಯ:** | 2021ನೇ ಸಾಲಿನ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ. |
| **ನಿರ್ಣಯ:** | ದಿನಾಂಕ 18.03.2021ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

**ಇತರ ವಿಷಯಗಳು.:**

1. ಮಂಗಳೂರು ವಿಶ್ವವಿದ್ಯಾನಿಲಯದ ನೂತನ ಕುಲಸಚಿವರ ನೇಮಕಾತಿ ಬಗ್ಗೆ ಸರಕಾರವು ವಿಧಿಸಿರುವ ಷರತ್ತುಗಳು ಮತ್ತು ಸದರಿ ಷರತ್ತುಗಳನ್ನು ರೂ.50/- ರ ಛಾಪಾ ಕಾಗದದಲ್ಲಿ ನಮೂದಿಸಿ ಸಹಿಯೊಂದಿಗೆ ಸರಕಾರಕ್ಕೆ ಸಲ್ಲಿಸಿದ ನಂತರ ಕರ್ತವ್ಯಕ್ಕೆ ವರದಿಮಾಡ ಬೇಕಾಗಿರುವ ನಿಬಂಧನೆಗಳು ಸಮಂಜಸವಲ್ಲವೆಂದು ಕೆಲವು ಸದಸ್ಯರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

2. ಪ್ರೊ. ಬಿ. ಹೆಚ್. ಶೇಖರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಕ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು AICTE, ನವದೆಹಲಿ ಪ್ರಾಯೋಜಕತ್ವದಲ್ಲಿ Institutional Development Project ನಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮಹಿಳೆಯರ ವಸತಿನಿಲಯಕ್ಕಾಗಿ ರೂ.3.0 ಕೋಟಿ ಅನುದಾನವನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ದೊರಕಿಸಿಕೊಟ್ಟದ್ದಕ್ಕಾಗಿ ಸಿಂಡಿಕೇಟು ಸಭೆಯು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅಭಿನಂದನೆಯನ್ನು ದಾಖಲಿಸಲಾಯಿತು.

3. ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಯನ ಮಂಡಳಿಗಳಿಗೆ ಸ್ನಾತಕೋತ್ತರ ಕಾರ್ಯಕ್ರಮಗಳ ಶಿಕ್ಷಕರುಗಳನ್ನೇ ನಾಮನಿರ್ದೇಶನ ಮಾಡುವುದಾಗಿ ಹಾಗೂ ಸ್ನಾತಕೋತ್ತರ ವಿಭಾಗಗಳಲ್ಲಿ ಅರ್ಹ ಶಿಕ್ಷಕರು ಲಭ್ಯವಿಲ್ಲದ ಪಕ್ಷದಲ್ಲಿ ನೆರೆಯ/ಅನ್ಯ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವಿಭಾಗಗಳ ಶಿಕ್ಷಕರುಗಳನ್ನು ನಾಮನಿರ್ದೇಶನ ಮಾಡಿಕೊಂಡು ಅಧ್ಯಯನ ಮಂಡಳಿಗಳನ್ನು ರಚಿಸಲಾಗುವುದಾಗಿ ಸಭೆಗೆ ತಿಳಿಸಲಾಯಿತು.

4. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಪಿ.ಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಯೋರ್ವರು ತಾವು ಅನ್ಯ ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್. ಪದವಿ ಕಾರ್ಯಕ್ರಮಕ್ಕೆ ಸಲ್ಲಿಸಿದ ಮಹಾಪ್ರಬಂಧದ ಸಾರಾಲೇಖವನ್ನೇ ವಿಶ್ವವಿದ್ಯಾನಿಲಯದ ಪಿ.ಹೆಚ್.ಡಿ. ಪದವಿ ಕಾರ್ಯಕ್ರಮಕ್ಕೂ ಬಳಸಿಕೊಂಡಿರುವ ಬಗ್ಗೆ ಸಂಶಯ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ವಿಷಯದ ವಿಚಾರಣೆಯನ್ನು ನಡೆಸಿ ಸಿಂಡಿಕೇಟು ಸಭೆಗೆ ವರದಿ ಸಲ್ಲಿಸುವಂತೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಲಾಯಿತು.

5. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದಲ್ಲಿ ಪಿ.ಹೆಚ್.ಡಿ. ಸಂಶೋಧನಾ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದು ಸ್ವಾಯತ್ತ ಕಾಲೇಜಿನ ಸಂಶೋಧನಾ ಮಾರ್ಗದರ್ಶರಿಗೆ ಹಂಚಿಕೆಯಾದ ಒಬ್ಬ ವಿದ್ಯಾರ್ಥಿಯನ್ನು, ಸದರಿ ಸ್ವಾಯತ್ತ

ಕಾಲೇಜು ಪರಿಗಣಿಸದೆ ಆ ಸಂಶೋಧನಾ ವಿದ್ಯಾರ್ಥಿಯನ್ನು ಅನ್ಯ ವಿಶ್ವವಿದ್ಯಾನಿಲಯದಲ್ಲಿ ನೋಂದಣಿ ಮಾಡಿರುವ ಬಗ್ಗೆ ದೂರು ಬಂದಿರುವ ಹಿನ್ನೆಲೆಯಲ್ಲಿ ಸದರಿ ವಿಷಯದ ಸತ್ಯಾಸತ್ಯತೆಯನ್ನು ಪರಾಮರ್ಶಿಸಿ ಸಿಂಡಿಕೇಟು ಸಭೆಗೆ ವರದಿ ಸಲ್ಲಿಸುವಂತೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಲಾಯಿತು.

6. ಸಿಂಡಿಕೇಟಿನ ನಾಲ್ಕನೇ ಸಾಮನ್ಯ ಸಭೆಯ ಕಾರ್ಯಸೂಚಿ ಸಂಖ್ಯೆ:ಸಿಂಡಿಕೇಟು: ಸಾ.ಸ.4:27 (2020)ರ ನಿರ್ಣಯವನ್ನು ಅತೀ ಶೀಘ್ರದಲ್ಲಿ ಅನುಷ್ಠಾನಕ್ಕೆ ತರಬೇಕಾಗಿ ಸಂಬಂಧಪಟ್ಟವರಿಗೆ ಸೂಚಿಸಲು ನಿರ್ಣಯಿಸಲಾಯಿತು.

7. ದಿನಾಂಕ 30.12.2020ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ನಾಲ್ಕನೇ ವಿಶೇಷ ಸಭೆಯ ಕಾರ್ಯಸೂಚಿ ಸಂಖ್ಯೆ:ಡಿಇವಿ.ವಿ.ಸ.4:09/2020ರ ನಿರ್ಣಯದಲ್ಲಿ ಸೋಲಾರ್ ವ್ಯವಸ್ಥೆಯನ್ನು ಸುಸ್ಥಿತಿಗೆ ತರಲು ಅತೀ ಶೀಘ್ರವಾಗಿ ಸೂಕ್ತ ಕ್ರಮಕೈಗೊಳ್ಳಬೇಕಾಗಿ ಸಂಬಂಧಪಟ್ಟವರಿಗೆ ಸೂಚಿಸಲು ನಿರ್ಣಯಿಸಲಾಯಿತು.

8. ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯವನ್ನು ಹೊರಗುತ್ತಿಗೆ ಮೂಲಕ ನಡೆಸುತ್ತಿರುವ ಮೆ.ಆಟ್ರಿಸ್ ಕಂಪನಿ, ಬೆಂಗಳೂರು ಇವರು ವಿದ್ಯಾರ್ಥಿಗಳ ಕಳೆದ ಹತ್ತು ವರ್ಷಗಳ ಡಾಟಾವನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ವಿಚಾರವನ್ನು ಸಭೆಯಲ್ಲಿ ಕುಲಸಚಿವರು (ಪರೀಕ್ಷಾಂಗ) ತಿಳಿಸಿರುತ್ತಾರೆ. ಮೆ.ಆಟ್ರಿಸ್ ಕಂಪನಿ, ಬೆಂಗಳೂರು ಇವರು ಸಂಪೂರ್ಣವಾಗಿ ಹಾಗೂ ನ್ಯೂನತೆರಹಿತ ಡಾಟ ನೀಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಕುಲಸಚಿವರು (ಪರೀಕ್ಷಾಂಗ) ರವರಿಗೆ ವಹಿಸುವ ಬಗ್ಗೆ ನಿರ್ಣಯಿಸಲಾಯಿತು. ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಅಳವಡಿಸಲಾದ **ಓಪನ್ ಸೋರ್ಸ್** ಗಣಕೀರಣಕ್ಕೆ ಸದರಿ ಮಾಹಿತಿಯನ್ನು ಶ್ರೀ ಹರೀಶ್ ಶೆಟ್ಟಿ ಇವರ ಸಹಯೋಗದೊಂದಿಗೆ update ಮಾಡಲು ಶೀಘ್ರ ಕ್ರಮಕೈಗೊಳ್ಳಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಲಾಯಿತು.

9. ಘನತವೆತ್ತ ರಾಜ್ಯಪಾಲರ ಕಚೇರಿ ಪತ್ರ ಸಂಖ್ಯೆ GS 06 GUM 2016 ದಿನಾಂಕ 26.04.2016ರ ನಿರ್ದೇಶನದಂತೆ ವಿಶ್ವವಿದ್ಯಾನಿಲಯದ ಎಲ್ಲಾ ಸಿಂಡಿಕೇಟು ಸಭೆಗಳ ನಡವಳಿಗಳನ್ನು ವೆಬ್‌ಸೈಟ್‌ನಲ್ಲಿ upload ಮಾಡಲು ತಿಳಿಸಿದ್ದು, ಅದರಂತೆ 2016ರಿಂದ ಈಗಿನವರೆಗಿನ ನಡವಳಿಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ದಾಖಲಿಸಲು ಕ್ರಮಕೈಗೊಳ್ಳಲು ತಿಳಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು